ಕರ್ನಾಟಕ ಸರ್ಕಾರ
(ಕನ್ನಡ ಮತ್ತು ಸಂಸ್ಕೃತಿ ಇಲಾಖೆ)

**ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು [ಕಾವಾ], ಸಿದ್ಧಾರ್ಥ ನಗರ, ಮೈಸೂರು**

**Chamarajendra Government College of Visual Arts [CAVA], Siddarthanagar, Mysore**

Phone: 0821-2438931, 2438930 e-Mail: deancava@gmail.com

ಸಿಎವಿ/ಎಡಿಎಂ/ಸಿಆರ್/67/2023-24 ದಿನಾಂಕ: 10-08-2023

ಗೆ,
ಉಪನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ,
ಧನ್ವಂತರಿ ರಸ್ತೆ, ಮೈಸೂರು.

ಮಾನ್ಯರೇ.

ವಿಷಯ: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಮೈಸೂರು ಸಂಸ್ಥೆಯ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ಪಡೆಯಲು ಸಂಸ್ಥೆಗಳಿಂದ ಇ-ಪ್ರೊಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ಅಹ್ವಾನಿಸುವ ಕುರಿತು.

ಉಲ್ಲೇಖ: ಈ ಕಾರ್ಯಾಲಯದ ಟೆಂಡರ್ ಪ್ರಕಟಣೆ ಸಮಸಂಖ್ಯೆ ಸಿಎವಿ/ಎಡಿಎಂ/ಸಿಆರ್/67/2023-24 ದಿನಾಂಕ: 10-08-2023

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಮೈಸೂರು ಸಂಸ್ಥೆಯ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿ, ಗ್ರೂಪ್ ಡಿ ಮತ್ತು ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ರನ್ವಯ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ನ (online) ಮುಖಾಂತರ ಇ-ಟೆಂಡರ್ ಕರೆಯಲಾಗಿದೆ.

ಸದರಿ ಪತ್ರಿಕಾ ಪ್ರಕಟಣೆಯನ್ನು ಈ ಕೂಡ ಅನುಬಂಧಿಸಿ ಕಳುಹಿಸುತ್ತಾ. ಸದರಿ ಪ್ರಕಟಣೆಯನ್ನು ರಾಜ್ಯ ಮಟ್ಟದ ಒಂದು ದಿನಪತ್ರಿಕೆಯಲ್ಲಿ ಹಾಗೂ ಸ್ಥಳೀಯ ಮಟ್ಟದ ಒಂದು ದಿನಪತ್ರಿಕೆಯಲ್ಲಿ ಪ್ರಕಟಿಸಿ, ಪ್ರಕಟಿಸಿದ 05 ದಿನಪತ್ರಕೆಗಳೊಂದಿಗೆ ಅದಕ್ಕೆ ತಗಲುವ ವೆಚ್ಚದ ಬಿಲ್ಲನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಲು ಕೋರಿದೆ.

ನಿಮ್ಮ ನಂಬುಗೆಯ,

ಡೀನ್
ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು
(ಕಾವಾ), ಮೈಸೂರು

ಡೀನ್
ಕಾವಾ, ಮೈಸೂರು

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ)

# ಟೆಂಡರ್ ಅರ್ಜಿ 2023–24

(ಇ-ಪ್ರಕ್ಯೂರ್ ಮೆಂಟ್ ಮುಖಾಂತರ ಮಾತ್ರ)

## ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್ ಡಿ ವೃಂದದ ತೋಟದ ಮಾಲಿ, ಕಾವಲುಗಾರರು, ಸ್ವಚ್ಛತಾಗಾರರು ಹಾಗೂ ಸೇವಕರ ಸೇವೆ ಒದಗಿಸಲು

ಭಾರತೀಯ ಪಠ್ಯಪುಸ್ತಕ ಮುದ್ರಣಾಲಯ ಆವರಣ, ಸಿದ್ದಾರ್ಥನಗರ, ಮೈಸೂರು– 570011

Phone: 0821-2438931 | e-mail:deancava@gmail.com

**ಟೆಂಡರ್ ಸೂಚಿಕೆ :-**

1. ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ

2. ಟೆಂಡರ್ ಪ್ರಕಟಣೆ

3. ಟೆಂಡರ್‌ನ ನಿಬಂಧನೆಗಳು ಮತ್ತು ಷರತ್ತುಗಳು

4. ತಾಂತ್ರಿಕ ಬಿಡ್ – ಅನುಸೂಚಿ – ಎ

5. ಆರ್ಥಿಕ ಬಿಡ್ – ಅನುಸೂಚಿ – ಬಿ

## ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ

| | | |
|---|---|---|
| 1. | ಟೆಂಡರ್ ಪ್ರಕಟಣೆಯ ದಿನಾಂಕ | 14.08.2023 |
| 2. | ಟೆಂಡರ್ ಡಾಕ್ಯೂಮೆಂಟ್ ಅಂತರ್ಜಾಲದಲ್ಲಿ ಪಡೆಯುವ ಆರಂಭಿಕ ದಿನಾಂಕ | 14.08.2023 |
| 3. | ಟೆಂಡರ್ ಡಾಕ್ಯೂಮೆಂಟ್ ಅಂತರ್ಜಾಲದಲ್ಲಿ ಪಡೆಯಲು ಕೊನೆಯ ದಿನಾಂಕ | 29.08.2023 |
| 4. | ಭರ್ತಿ ಮಾಡಿದ ಟೆಂಡರ್‌ನ್ನು ಅಂತರ್ಜಾಲದ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ | 29.08.2023 |
| 5. | ತಾಂತ್ರಿಕ ಬಿಡ್ ತೆರೆಯುವ ದಿನಾಂಕ | 31.08.2023 |
| 6. | ಆರ್ಥಿಕ ಬಿಡ್ ತೆರೆಯುವ ದಿನಾಂಕ | 01.09.2023 |

ಕರ್ನಾಟಕ ಸರ್ಕಾರ
(ಕನ್ನಡ ಮತ್ತು ಸಂಸ್ಕೃತಿ ಇಲಾಖೆ)
**ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು [ಕಾವಾ],ಸಿದ್ಧಾರ್ಥ ನಗರ, ಮೈಸೂರು**
Chamarajendra Government College of Visual Arts[CAVA], Siddarthanagar, Mysore
Phone: 0821-2438931,2438930e-Mail : deancava@gmail.com

ನಂ.ಸಿಎವಿ/ಎಡಿಎಂ/ಸಿಆರ್/67/23-24 ದಿನಾಂಕ:10/08/2023

# ಟೆಂಡರ್ ಪ್ರಕಟಣೆ

(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

https://eproc.karnataka.gov.in

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಮೈಸೂರು ಇಲ್ಲಿಗೆ ಹೊರಗುತ್ತಿಗೆ ಮೂಲಕ ಗ್ರೂಪ್ ಡಿ ವೃಂದದ ತೋಟದ ಮಾಲಿ, ಕಾವಲುಗಾರರು, ಸ್ವಚ್ಛತಾಗಾರರು, ಹಾಗೂ ಸೇವಕರ ಸೇವೆಯನ್ನು ಒದಗಿಸಲು ನೋಂದಾಯಿತ ಮತ್ತು ಪರವಾನಗಿಯುಳ್ಳ ಅರ್ಹ ಏಜೆನ್ಸಿ ಸಂಸ್ಥೆಗಳಿಂದ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ನಿಗದಿತ ನಮೂನೆಯಲ್ಲಿ 2 ಬಿಡ್ ವಿಧಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಹೊರಗುತ್ತಿಗೆ ಸೇವೆ ಒದಗಿಸುವ ಸಿಬ್ಬಂದಿಗಳ ವೇತನ, ಇಎಸ್ಐ, ಪಿ.ಎಫ್ ಮುಂತಾದವುಗಳನ್ನು ಅಧಿಸೂಚನೆ ಸಂಖ್ಯೆ ಕಾಇ 18 ಎಲ್ ಡಬ್ಲ್ಯೂಎ 2022 ದಿನಾಂಕ 28-07-2022 ರಲ್ಲಿ ನಿಗದಿ ಪಡಿಸಿದ ಎಲ್ಲಾ ಷರತ್ತುಗಳ ಅನ್ವಯ ದರಗಳನ್ನು ನಮೂದಿಸುವುದು.

## ಸೇವೆಗಳ ಸಂಕ್ಷಿಪ್ತ ವಿವರ

1 **ತೋಟದ ಮಾಲಿ (ಗ್ರೂಪ್ ಡಿ) ಸಿಬ್ಬಂದಿ: [01]**

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಮೈಸೂರು ಇಲ್ಲಿ ಆಡಳಿತ ಕಚೇರಿ ಕಟ್ಟಡಗಳ ಹೊರ ಆವರಣದಲ್ಲಿ ಉದ್ಯಾನವನ್ನು ನಿರ್ಮಾಣ ಹಾಗೂ ನಿರ್ವಹಣೆ ಕಾರ್ಯ ಮಾಡಬೇಕಾಗಿರುತ್ತದೆ.

2 **ಕಾವಲುಗಾರರು (ಗ್ರೂಪ್ ಡಿ) ಸಿಬ್ಬಂದಿ: [02]**

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಮೈಸೂರಿನ ಕಚೇರಿ / ಕಾಲೇಜನ್ನು 3 ಪಾಳಿಯಲ್ಲಿ ಭದ್ರತಾ ಸೇವೆಯನ್ನು ಒದಗಿಸುವುದು.

3 **ಸ್ವಚ್ಛತಾಗಾರರು (ಗ್ರೂಪ್ ಡಿ) ಸಿಬ್ಬಂದಿ: [02]**

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಮೈಸೂರು ಇಲ್ಲಿ ಆಡಳಿತ ಕಚೇರಿ ಕಟ್ಟಡಗಳ ಒಳ ಮತ್ತು ಹೊರ ಆವರಣದಲ್ಲಿ ಇರುವ ಎಲ್ಲ ಕೊಠಡಿಗಳ ಸ್ವಚ್ಛತಾ ಕಾರ್ಯ, ಶೌಚಾಲಯಗಳ ಸ್ವಚ್ಛತೆ, ವಾಷ್‌ಬೇಸಿನ್‌ಗಳ ಸ್ವಚ್ಛತೆ ಮತ್ತು ಕಟ್ಟಡದ ಕಿಟಕಿ ಬಾಗಿಲುಗಳು ಮತ್ತು ಇತರೆ ಸ್ವಚ್ಛತೆಯ ಕಾರ್ಯ ನಿರ್ವಹಿಸಲು ಸ್ವಚ್ಛತ ಸೇವೆಯ / ಸ್ಕಾವೆಂಜರ್ ಸಿಬ್ಬಂದಿಯ ಮೂಲಕ ಸ್ವಚ್ಛತೆ ವೆವಸ್ಥೆಯನ್ನು ಕೆಲಸ ನಿರ್ವಹಿಸಬೇಕಾಗಿದೆ.

4 **ಸೇವಕರು (ಗ್ರೂಪ್ ಡಿ) ಸಿಬ್ಬಂದಿ: [03]**

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಮೈಸೂರು ಇಲ್ಲಿ ಆಡಳಿತ ಕಚೇರಿ ಕಟ್ಟಡಗಳ ಒಳ ಮತ್ತು ಹೊರ ಆವರಣದಲ್ಲಿ ಇರುವ ಎಲ್ಲ ಕೊಠಡಿಗಳ ಸ್ವಚ್ಚತಾ ಕಾರ್ಯ, ಶೌಚಾಲಯಗಳ ಸ್ವಚ್ಚತೆ, ವಾಷ್‌ಬೇಸಿನ್‌ಗಳ ಸ್ವಚ್ಚತೆ ಮತ್ತು ಕಟ್ಟಡದ ಕಿಟಕಿ ಬಾಗಿಲುಗಳು ಮತ್ತು ಇತರೆ ಸ್ವಚ್ಚತೆಯ ಕಾರ್ಯ ನಿರ್ವಹಿಸುವುದು

| | | |
|---|---|---|
| 5 | ಗ್ರೂಪ್ ಡಿ ವೃಂದದ ತೋಟದ ಮಾಲಿ, ಕಾವಲುಗಾರರು, ಸ್ವಚ್ಚತಾಗಾರರು, ಹಾಗೂ ಸೇವಕರ (ಗ್ರೂಪ್ ಡಿ) ಸೇವೆಯ ಕೆಲಸಗಳನ್ನು ನಿರ್ವಹಿಸಲು ಇಷ್ಟು ಅಂದಾಜು ಮೌಲ್ಯ ರೂ. | 19.00. ಲಕ್ಷ |
| 6 | ನಿಗದಿಪಡಿಸಿದ ಇಎಂಡಿ ಮೊತ್ತ ರೂ. 2.5% | 47,500/- |
| 7 | ಟೆಂಡರ್ ಪ್ರಕಟಣೆಯ ದಿನಾಂಕ | 14.08.2023 |
| 8 | ಟೆಂಡರ್ ಡಾಕ್ಯೂಮೆಂಟ್ ಅಂತರ್ಜಾಲದಲ್ಲಿ ಪಡೆಯುವ ಆರಂಭಿಕ ದಿನಾಂಕ | 14.08.2023 |
| 9 | ಟೆಂಡರ್ ಡಾಕ್ಯೂಮೆಂಟ್ ಅಂತರ್ಜಾಲದಲ್ಲಿ ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ | 29.08.2023<br>ಸಂಜೆ 5.00 ಗಂಟೆ |
| 10 | ಭರ್ತಿ ಮಾಡಿದ ಟೆಂಡರ್‌ನ್ನು ಅಂತರ್ಜಾಲದ ಮುಖಾಂತರ ನಮೂದಿಸಲು ಕೊನೆಯ ದಿನಾಂಕ ಮತ್ತು ಸಮಯ | 29.08.2023<br>ಸಂಜೆ 5.30 ಗಂಟೆ |
| 11 | ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ | 31.08.2023<br>ಸಂಜೆ 4.00 ಗಂಟೆ |
| 12 | ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ | 01.09.2023<br>ಸಂಜೆ 4.00 ಗಂಟೆ |

**ಸವಿವರವಾದ ತಾಂತ್ರಿಕ ಅಂಶಗಳು, ಇತರ ಷರತ್ತುಗಳು ಮತ್ತು ನಿಬಂಧನೆಗಳನ್ನು ಟೆಂಡರ್ ಅರ್ಜಿಯಲ್ಲಿ ವಿವರಿಸಲಾಗಿದೆ.**

[ದೇವರಾಜು.ಎ ಕ.ಆ.ಸೇ]
ಡೀನ್,
ಚಾಮರಾಜೇಂದ್ರ ದೃಶ್ಯಕಲಾ ಕಾಲೇಜು
(ಕಾವಾ), ಮೈಸೂರು.

## ಟೆಂಡರ್ ಷರತ್ತುಗಳು ಮತ್ತು ನಿಬಂಧನೆಗಳು

1. ಟೆಂಡರ್ ದಾರರು ಇ.ಎಂ.ಡಿ ಮೊತ್ತ ರೂ. **47,500-00** ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ಇ-ಪ್ರೊಕ್ಯೂರ್ ಮೆಂಟ್ ನಲ್ಲಿ ತಿಳಿಸಿರುವಂತೆ ಅಂತರ್ಜಾಲದ ಮೂಲಕ ಪಾವತಿಸುವುದು.

2. ಯಾವುದೇ ಟೆಂಡರುದಾರರು ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ ಇ.ಎಂ.ಡಿ ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ಒಳಗೆ ಒಂದೇ ಕಂತಿನಲ್ಲಿ ಪಾವತಿಸಬೇಕು. ಭಾಗಶಃ ಪಾವತಿಸುವ ಅಥವಾ ಪಾವತಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

3. ಟೆಂಡರ್ ನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ 2 ಬಿಡ್ ವಿಧಾನದಲ್ಲಿ ಕರೆಯಲಾಗಿದೆ. ಟೆಂಡರ್ ಅರ್ಜಿ ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್ https://www.eprorc.karnataka.gov.in ಅಂತರ್ಜಾಲದ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

4. ಇಲಾಖೆಯು ಸಂದರ್ಭಾನುಸಾರ ಗ್ರೂಪ್ ಡಿ ವೃಂದದ ತೋಟದ ಮಾಲಿ, ಕಾವಲುಗಾರರು, ಸ್ವಚ್ಛತಾಗಾರರು, ಹಾಗೂ ಸೇವಕರ ಸೇವೆಗಳನ್ನು ಅಗತ್ಯ ಮತ್ತು ಕೆಲಸಕ್ಕನುಗುಣವಾಗಿ ನಿಗದಿಪಡಿಸಲಾಗುವುದು.

5. ದರಗಳನ್ನು ಆರ್ಥಿಕ ಬಿಡ್ 'ಅನುಸೂಚಿ-ಬಿ' ರಲ್ಲಿ ಇರುವಂತೆ ನಿಗದಿತ ನಮೂನೆಯಲ್ಲಿಯೇ ಸಲ್ಲಿಸಬೇಕು.

6. ಕಾನೂನು ರೀತ್ಯಾ ಯಾವುದೇ ಲೆವಿಗಳು ಹೆಚ್ಚಾದ ಸಂದರ್ಭದ ಹೊರತಾಗಿ, ಸೇವೆ ಒದಗಿಸುವ ಏಜೆನ್ಸಿಯ ಯಾವುದೇ ಇತರೆ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.

7. ಟೆಂಡರ್‌ನಲ್ಲಿ ಭಾಗವಹಿಸುವ ಏಜೆನ್ಸಿಯವರು ಸಲ್ಲಿಸುವ ಸೇವಾ ಶುಲ್ಕದ ಮೊತ್ತವನ್ನು ಕನಿಷ್ಠ 1.00 ರೂ ಗಳಿಗೆ ಕಡಿಮೆ ಇಲ್ಲದಂತೆ ನಮೂದಿಸಬೇಕು.

### ಟೆಂಡರ್ ನಲ್ಲಿ ಭಾಗವಹಿಸಲು ಕನಿಷ್ಠ ಅರ್ಹತೆಗಳು ದಾಖಲೆಗಳು

a) ಸಿಬ್ಬಂದಿ [Man Power] ಸರಬರಾಜು ಮಾಡುವ ಬಿಡ್ಡುದಾರನು ಕರ್ನಾಟಕ ರಿಜಿಸ್ಟರ್ ಕಛೇರಿಯನ್ನು 1956 ರ ಕಂಪನಿ ಆಕ್ಟ್ ನಂತೆ ಟೆಂಡರ್ ನೋಟಿಸ್ ಹೊರಡಿಸಿದ ದಿನಾಂಕಕ್ಕೆ ಐದು ವರ್ಷಗಳು ಪೂರ್ಣಗೊಂಡಿರಬೇಕು.

b) ಟೆಂಡರುದಾರರು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ರೂ. 50 ಲಕ್ಷಗಳ ವಾರ್ಷಿಕ ಹಣಕಾಸು ವಹಿವಾಟು ನಡೆಸಿರಬೇಕು.

c) ಟೆಂಡರುದಾರರು ಒದಗಿಸುವ ಸಿಬ್ಬಂದಿಯ ಹಿತರಕ್ಷಣೆಗಾಗಿ ಸರ್ಕಾರದಿಂದ ಅನುದಾನ ಬರುವುದು ವಿಳಂಬವಾದರೆ ಮತ್ತು ಬಿಲ್‌ಪಾವತಿಯು ವಿಳಂಬವಾದ ಸಂದರ್ಭದಲ್ಲಿ

ಸಿಬ್ಬಂದಿಗಳಿಗೆ ತೊಂದರೆಯಾಗದಂತೆ ಮಾಸಿಕ ವೇತನ ನೀಡಲು ಆರು ತಿಂಗಳ ಯಶಸ್ವಿ ಟೆಂಡರ್ ಮೊತ್ತವನ್ನು ಮುಂಗಡವಾಗಿ ಠೇವಣಿ ಇಟ್ಟಿರಬೇಕು.

d) ಟೆಂಡರುದಾರರು ನೀಡುವ ಸಿಬ್ಬಂಧಿ ಸೇವಾ ಬಿಲ್ಲಿನಲ್ಲಿ ನಿಯಮಾನುಸಾರ ಆದಾಯ ತೆರಿಗೆ ಮತ್ತು ಜಿ.ಎಸ್.ಟಿ ಮೊತ್ತವನ್ನು ಕಟಾವಣೆ ಮಾಡಲಾಗುವುದು.

e) ಟೆಂಡರುದಾರರ ಏಜೆನ್ಸಿ ಸಂಸ್ಥೆಯು ತನ್ನ ಎಲ್ಲಾ ಚಟುವಟಿಕೆಗಳನ್ನು ಮೈಸೂರು ವ್ಯಾಪ್ತಿಯಲ್ಲಿ ಕಛೇರಿ ಹೊಂದುವುದು ಅವಶ್ಯಕವಿರುತ್ತದೆ.

f) ಕನ್ಸ್ರೋಟಿಯಮ್ ಪಾರ್ಟನರ್ ನಿಂದ ಸಲ್ಲಿಸಿದ ಟೆಂಡರನ್ನು ಸ್ವೀಕರಿಸುವುದಿಲ್ಲ.

8. **ಟೆಂಡರ್ ನೊಂದಿಗೆ ಈ ಮುಂದಿನ ಪ್ರತಿಗಳನ್ನು ಲಗತ್ತಿಸುವುದು**.

a) ಕರ್ನಾಟಕ ಕಾರ್ಮಿಕ ಇಲಾಖೆಯಲ್ಲಿ ನೊಂದಾವಣಿಯಾಗಿರುವ ಪ್ರಮಾಣ ಪತ್ರ ಕಾರ್ಮಿಕ ಇಲಾಖೆಯಿಂದ ಷರತ್ತುಗಳು ಉಲ್ಲಂಘನೆಯಾಗದಿರುವ ಬಗ್ಗೆ ಪ್ರಮಾಣ ಪತ್ರದ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು.

b) ಖಾಸಗಿಯಾಗಿ ನೊಂದಾಯಿತ ಸಂಸ್ಥೆಯ ಮೂಲಕ ಹೊರಗುತ್ತಿಗೆ ವ್ಯವಹಾರ ನಡೆಸಲು ಪೊಲೀಸ್ ಪರಿಶೀಲನಾ ಅನುಮತಿ ಪ್ರಮಾಣ ಪತ್ರ ಸಲ್ಲಿಸುವುದು.

c) ಟೆಂಡರುದಾರರು ಭವಿಷ್ಯನಿಧಿ(ಇ.ಪಿ.ಎಫ್)ಕಾಯ್ದೆ ನಿಯಮಗಳ ಅನ್ವಯ ಒಗಿಸುವ ಸಿಬ್ಬಂದಿಯ ವಂತಿಕೆ ಪಾವತಿಯ ಕಡ್ಡಾಯ ಸದಸ್ಯರಾಗಿರುವ ಬಗ್ಗೆ ಸಕ್ಷಮ ಪ್ರಾಧಿಕಾರಿಗಳಿಂದ ಪಡೆದಿರುವ ಪ್ರಮಾಣಪತ್ರ ಮತ್ತು ಡೆಪ್ಯುಟಿ ಡೈರೆಕ್ಟರ್ ರವರಿಂದ 2020-21 ನೇ ಸಾಲಿನಲ್ಲಿ ಭವಿಷ್ಯನಿಧಿ ಪಾವತಿಸಿರುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವುದು.

d) ಟೆಂಡರುದಾರರು ಇ.ಎಸ್.ಐ ಕಾಯ್ದೆ ಅಡಿಯಲ್ಲಿ ನೊಂದಣಿಯಾಗಿರುವ ಕೋಡ್ ಸಂಖ್ಯೆ ವಿವರದ ಪ್ರತಿ, ಡೆಪ್ಯುಟಿ ಡೈರೆಕ್ಟರ್ ರವರಿಂದ 2023-24 ನೇ ಸಾಲಿನಲ್ಲಿ ಇ.ಎಸ್.ಐ ಪಾವತಿಸಿರುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವುದು.

e) ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ ನೋಂದಣಿಯಾಗಿರುವ ಪ್ರಸ್ತುತ ವರ್ಷಕ್ಕೆ ಚಾಲ್ತಿಯಲ್ಲಿರುವ ಪ್ರಮಾಣಪತ್ರದ ದೃಢೀಕರಿಸಿದ ದಾಖಲೆಯನ್ನು ಸಲ್ಲಿಸುವುದು.(**Firm registration certificate**)

f) ಜಿ.ಎಸ್.ಟಿ ನೊಂದಣಿ ಪತ್ರದ ಪ್ರತಿ ಮತ್ತು 2023-24 ನೇ ಸಾಲಿನಲ್ಲಿ ಸಂಸ್ಥೆಯಿಂದ ಆದಾಯ ತೆರಿಗೆ ಪಾವತಿಸಿರುವ ಬಗ್ಗೆ ಹಾಗೂ ಕಛೇರಿ ವಿವರವನ್ನೊಳಗೊಂಡ ವಿವರದ ಮಾಹಿತಿ, ಹಾಗೂ ಆದಾಯ ತೆರಿಗೆ ಇಲಾಖೆಯಿಂದ ದೃಢೀಕರಿಸಿರುವ ನಮೂನೆ ಮತ್ತು ಟೆಂಡರುದಾರರು 2019-20 ರಿಂದ 2022-23 ರ ವರೆಗೆ ಪ್ರತಿ ಸಲ್ಲಿಸುವುದು.

g) ಗುತ್ತಿಗೆದಾರರ 2019-20 ರಿಂದ 2022-23 ರವರೆಗೆ ಸಾಧಿಸಿದ ಕನಿಷ್ಠ ರೂ. 50.00 ಲಕ್ಷಗಳ ವಾರ್ಷಿಕ ಹಣಕಾಸು ವಹಿವಾಟು ನಡೆಸಿರುವ ಬಗ್ಗೆ ಚಾರ್ ಟೆಂಡ್ ಅಕೌಂಟೆಂಟ್ ರವರು ನೀಡಿದ ಪ್ರಮಾಣೀಕೃತ ಬ್ಯಾಲೆನ್ಸ್ ಶೀಟ್ ನ್ನು ಲಗತ್ತಿಸುವುದು.

h) 2020-21 ಮತ್ತು 2022-23 ನೇ ಸಾಲಿನಲ್ಲಿ ವೃತ್ತಿ ತೆರಿಗೆಯನ್ನು ಸಂಬಂಧಿಸಿದ ಇಲಾಖೆಯಲ್ಲಿ ಪಾವತಿಸಿರುವ ತೀರುವಳಿ ವಿರದ ಪ್ರತಿ ಲಗತ್ತಿಸುವುದು.

i) 2017-18 ರಿಂದ 2022-23 ರ ವರೆಗೆ ಪಡೆಯಲಾದ ಕನಿಷ್ಠ ಎರಡು ಟೆಂಡರುಗಳಲ್ಲಿ ಕೆಳಗೆ ತಿಳಿಸಿದ ವರ್ಗಗಳಿಗೆ ಕನಿಷ್ಠ 30 ಸಿಬ್ಬಂದಿಗಳನ್ನು ಯಶಸ್ವಿಯಾಗಿ ಒದಗಿಸಿರುವ ಬಗ್ಗೆ ದಾಖಲೆಗಳು ಡಿ-ಗ್ರೂಪ್ ವೃಂದದ 1) ಕಾವಲುಗಾರರು 2) ತೋಟದ ಮಾಲಿ 3) ಸ್ವಚ್ಛತಾಗಾರರು 4) ಸೇವಕರುಗಳನ್ನು ಒದಗಿಸಿರುವ ಬಗ್ಗೆ ನಗರ ಸ್ಥಳೀಯ ಸಂಸ್ಥೆಗಳಿಂದ ನೀಡಲಾದ ಅನುಭವ ಪ್ರಮಾಣ ಪತ್ರಸಲ್ಲಿಸುವುದು. ಸೇವಾ ದೃಢೀಕರಣ / ಅನುಭವ ಪ್ರಮಾಣ ಪತ್ರದಲ್ಲಿ ಸರಬರಾಜು ಮಾಡಿದ ಸಿಬ್ಬಂದಿಗಳ ಸಂಖ್ಯೆ ಮತ್ತು ವರ್ಗ ನಮೂದಿಸಿರುವ ದೃಢೀಕೃತ ಪ್ರತಿ ಸಲ್ಲಿಸುವುದು.

j) ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಸಿಬ್ಬಂದಿಗಳಿಗೆ ನಿಗದಿತ ಅವಧಿಯಲ್ಲಿ ವೇತನ ಪಾಲಿಸಿರುವ ಬಗ್ಗೆ ಕಳೆದ ನಾಲ್ಕು ತಿಂಗಳ ಅವಧಿಯ ಬ್ಯಾಂಕ್ ಖಾತೆಯ ದಾಖಲೆ ಸಲ್ಲಿಸಬೇಕು.

k) ಟೆಂಡರುದಾರರು ಸರ್ಕಾರ / ಸರ್ಕಾರಿ ಸ್ವಾಮ್ಯದ ಗ್ರೂಪ್ ಡಿ ವೃಂದದ ತೋಟದ ಮಾಲಿ, ಕಾವಲುಗಾರರು, ಸ್ವಚ್ಛತಾಗಾರರು, ಹಾಗೂ ಸೇವಕರ ಸೇವೆ ಯಶಸ್ವಿಯಾಗಿ ನಡೆಸಿಲ್ಲದೆ ಸುಸ್ತಿದಾರರಾಗಿ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ರೂ. 100/- (ಒಂದು ನೂರು ರೂ) ಗಳ ಛಾಪಾಕಾಗದದಲ್ಲಿ ನೋಟರಿಯಿಂದ ಅಫಿಡೆವಿಟ್ ಸಲ್ಲಿಸಬೇಕು.

l) ಬಿಡ್ಡುದಾರನು ತಾನು ಪಡೆದ ಗುತ್ತಿಗೆಯನ್ನು ಬೇರೆ ಯಾವುದೇ ಏಜೆನ್ಸಿ / ಸಂಸ್ಥೆಗಳ ಉಪ ಗುತ್ತಿಗೆ ಅಥವಾ ಹೊರಗುತ್ತಿಗೆ ನೀಡದಿರುವ ಬಗ್ಗೆ ಛಾಪಾಕಾಗದಲ್ಲಿ ಸೇರಿಸಬೇಕು.

m) ಟೆಂಡರ್ ದಾರರು ಐ.ಎಸ್.ಓ ಮಾನ್ಯತೆ ಪಡೆದಿರುವ ಬಗ್ಗೆ ದೃಢೀಕೃತ ಪ್ರಮಾಣ ಪತ್ರ ಸಲ್ಲಿಸುವುದು.

**ಮೇಲಿನ ಕ್ರ.ಸಂ.(a) ಇಂದ (L) ವರೆಗಿನ ದಾಖಲೆ ಪ್ರತಿಗಳನ್ನು ಕ್ರಮಾಂಕನುಸಾರವಾಗಿ ಲಗತ್ತಿಸಿರಬೇಕು**.

9. ಟೆಂಡರ್ ದಸ್ತಾವೇಜು ಕ್ರಮಸಂಖ್ಯೆ (7 ಮತ್ತು 8) ರಲ್ಲಿ ಸೂಚಿಸಿದ ಅರ್ಹತೆಗಳು ಮತ್ತು ಯಾವುದೇ ದಸ್ತಾವೇಜುಗಳಿಲ್ಲದ ಟೆಂಡರನ್ನು ತಿರಸ್ಕರಿಸಲಾಗುತ್ತದೆ.

10. ಅಂಗೀಕೃತವಾಗದ ಟೆಂಡರ್ ಗಳಿಗೆ ಸಂಬಂಧಪಟ್ಟಂತೆ ಟೆಂಡರನ್ನು ತೆರೆದ ದಿನಾಂಕದಿಂದ 15 ದಿನಗಳೊಳಗೆ ಅವರ ಇ.ಎಂ.ಡಿಯನ್ನು ಹಿಂತಿರುಗಿಸಲಾಗುವುದು ಮತ್ತು ಅಂಗೀಕೃತ ಟೆಂಡರ್ ಗಳಿಗೆ ಸಂಬಂಧಪಟ್ಟಂತೆ ದರಗಳು ಯಶಸ್ವಿಯಾದ ಟೆಂಡರ್ ದಾರರಿಗೆ ಕಾರ್ಯದೇಶದ ದಿನಾಂಕದಿಂದ 01 ವರ್ಷದ ಅವಧಿಯವರೆಗೆ ಚಾಲ್ತಿಯಲ್ಲಿ ಇರುತ್ತವೆ. ಸದರಿಯವರ ಇ.ಎಂ.ಡಿಯನ್ನು ಅವಧಿ ಪೂರ್ಣಗೊಂಡ ನಂತರ ಪರಿಶೀಲಿಸಿ ಹಿಂತಿರುಗಿಸಲಾಗುವುದು. ಈ ಇ.ಎಂ.ಡಿ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ. ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

11. ಯಾವುದೇ ಟೆಂಡರುದಾರರು ಚಾಲ್ತಿ ಅವಧಿಯೊಳಗೆ ಸೂಚಿತ ದರಗಳಿಗೆ ಒಪ್ಪದಿದ್ದಲ್ಲಿ, ಅಥವಾ ಯಾವುದೇ ಷರತ್ತುಗಳು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಎಫ್.ಎಸ್.ಡಿ. [ಭದ್ರತಾ ಠೇವಣಿ] ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

12. ಏಜೆನ್ಸಿ ಸಂಸ್ಥೆಯು ನಿಯೋಜಿಸಬಹುದಾದ ತನ್ನ ಸಿಬ್ಬಂದಿ ಸೇವೆಯಲ್ಲಿ ಯಾವುದೇ ತಪ್ಪು-ಒಪ್ಪುಗಳಿಗೆ ಹಾಗೂ ಸರ್ಕಾರಕ್ಕೆ ಆಗುವ ನಷ್ಟಗಳಿಗೆ ಏಜನ್ಸಿಯೇ ಜವಾಬ್ದಾರರಾಗಿರುತ್ತಾರೆ.

13. ಆಗ್ಗಿಂದಾಗ್ಗೆ ಹೊರಡಿಸುವ ಕೇಂದ್ರ / ರಾಜ್ಯ ಸರ್ಕಾರದ ವಿವಿಧ ಕಾಯ್ದೆಗಳು ಮತ್ತು ವಿನಿಮಯಗಳ ಮೇರೆಗೆ ತನ್ನ ಸಿಬ್ಬಂದಿ ವೇತನ, ಭತ್ಯೆ, ಬೋನಸ್, ಉಪಾದಾನ (Gratuity) ಮತ್ತು ಇತರ ಸೌಲಭ್ಯಗಳನ್ನು ನೀಡಲು ಏಜೆನ್ಸಿಯವರೇ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ.

14. ಟೆಂಡರುದಾರರ ಏಜೆನ್ಸಿ ಸಂಸ್ಥೆಯು ನಿಯೋಜಿಸುವ ಸಿಬ್ಬಂದಿಯ ವಯಸ್ಸು ಅಗತ್ಯವಾಗಿ 25 ರಿಂದ 45 ವರ್ಷಗಳ ವಯೋಮಾನದೊಳಗಿರಬೇಕು. ಅನಾರೋಗ್ಯ, ತುರ್ತು ಸಂದರ್ಭ ಹಾಗೂ ಗೈರುಹಾಜರಿಯ ಸಂದರ್ಭದಲ್ಲಿ ಬದಲಿ ಸಿಬ್ಬಂದಿಯನ್ನು ಏಜೆನ್ಸಿಯೇ ವ್ಯವಸ್ಥೆ ಮಾಡಿ ವಾರದ ಏಳು ದಿನಗಳಲ್ಲಿಯೂ ಸೇವೆಯನ್ನು ಒದಗಿಸಬೇಕು.

15. ಟೆಂಡರ್‌ದಾರ ಏಜೆನ್ಸಿ ಸಂಸ್ಥೆಯು ನಿಯೋಜಿಸುವ ನೌಕರರಿಗೆ ಕಡ್ಡಾಯವಾಗಿ ಸಮವಸ್ತ್ರವನ್ನು ಒದಗಿಸಬೇಕು ಹಾಗೂ ತಮ್ಮ ಸೇವೆಯ ಜೊತೆಗೆ ಸಿಬ್ಬಂದಿಯು ಅಗ್ನಿಶಮನ ಕಾರ್ಯಚರಣೆಯಲ್ಲಿ ಬಳಸುವ ಉಪಕರಣಗಳ ಬಳಕೆಯ ಬಗ್ಗೆ ತಿಳಿವಳಿಕೆಯನ್ನು ಹೊಂದಿರಬೇಕು.

16. ವಾರದ 7 ದಿನಗಳಲ್ಲಿ ಕೆಲಸ ನಿರ್ವಹಿಸಲು ನಿಯೋಜಿಸಲಾದ ಸಿಬ್ಬಂದಿಯ ಚಲನವಲನ ಮತ್ತು ಕಾರ್ಯನಿರ್ವಹಣೆಯ ಬಗ್ಗೆ ತಪಾಸಿಸಲು ಪೂರ್ವಸೂಚನೆ ಇಲ್ಲದೆ ಕಾಲಕಾಲಕ್ಕೆ ತಪಾಸಣೆಯನ್ನು ಏಜನ್ಸಿಯು ನಡೆಸಬೇಕು. ಈ ಬಗ್ಗೆ ಆಗ್ಗಿಂದಾಗ್ಗೆ ಇಲಾಖೆಯ ಸ್ಥಾನಿಕ ಕಚೇರಿ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸಬೇಕು. ಪ್ರತಿನಿತ್ಯದ ಪಾಳೆಯಗಳ ಸಿಬ್ಬಂದಿಗಳ ಹಾಜರಿ ಪುಸ್ತಕ ನಿರ್ವಹಣೆ ಮಾಡಬೇಕು ಮತ್ತು ಅದನ್ನು ಇಲಾಖೆಯ ಸ್ಥಾನಿಕ ಕಚೇರಿ ಅಧಿಕಾರಿಗಳಿಗೆ ಒಪ್ಪಿಸಿ ಸಹಿ ಪಡೆಯಬೇಕು.

17. ಗುತ್ತಿಗೆ ಕಾರ್ಮಿಕರ ಕಾಯ್ದೆ, ಭವಿಷ್ಯನಿಧಿ ಕಾಯ್ದೆ, ರಾಜ್ಯ ಕಾರ್ಮಿಕರ ವಿಮಾ ಕಾಯ್ದೆ, ಬೋನಸ್ ಕಾಯ್ದೆ, ಕನಿಷ್ಠ ವೇತನ ಕಾಯ್ದೆ ಹಾಗೂ ಇತರೆ ನಿಯಮಗಳನ್ನು ಒಳಗೊಂಡಂತೆ ಹಾಗೂ ಸಂಬಂಧಪಟ್ಟ ಎಲ್ಲ ಕಾಯ್ದೆಗಳಲ್ಲಿ ಉಪಬಂಧಿಸಲಾಗಿರುವ ಎಲ್ಲ ಅಗತ್ಯ ದಾಖಲೆಗಳು, ರಿಜಿಸ್ಟರ್‌ಗಳು ಮತ್ತು ಇತರ ಕಾಗದಪತ್ರಗಳನ್ನು ಏಜೆನ್ಸಿಯವರೇ ನಿರ್ವಹಿಸಬೇಕು. ಸರ್ಕಾರದ ನಿಯಮಗಳಂತೆ ಕನಿಷ್ಠ ವೇತನ ಕಾಯ್ದೆಗೆ ಅನುಗುಣವಾಗಿ ನಿಗದಿಪಡಿಸಿದ ದರಗಳನ್ನು ತನ್ನ ಸಿಬ್ಬಂದಿಗೆ ನೀಡಬೇಕು.

18. ಟೆಂಡರ್‌ದಾರರ ಏಜೆನ್ಸಿಯು ನಿಯೋಜಿಸುವ ಸಿಬ್ಬಂದಿಗೆ ಪ್ರತಿ ತಿಂಗಳು ಸಂದಾಯ ಮಾಡುವ ಸೇವಾ ವೆಚ್ಚದ ಬಿಲ್ಲಿನ ಜೊತೆ ಭವಿಷ್ಯನಿಧಿ, ರಾಜ್ಯ ಕಾರ್ಮಿಕರ ವಿಮಾ ಯೋಜನೆಯ ಕಂತುಗಳ ಪಾವತಿಯ ಪೂರ್ಣ ವಿವರಗಳನ್ನು ನಮೂದಿಸಿರಬೇಕು ಹಾಗೂ ಟೆಂಡರ್‌ನಲ್ಲಿ ನಮೂದಿಸಿರುವ ದರಗಳನ್ನು ಪ್ರಾಧಿಕಾರ ಒಪ್ಪಿರುವ ಎಲ್ಲ ಸೇವಾ ಶುಲ್ಕಗಳನ್ನು ಕಡ್ಡಾಯವಾಗಿ ಬಿಲ್ಲಿನಲ್ಲಿ ಪ್ರತ್ಯೇಕವಾಗಿ ತೋರಿಸಿರಬೇಕು.

19. ಟೆಂಡರ್ ಪ್ರಕ್ರಿಯೆ ಕಾಲಾವಧಿಯಲ್ಲಿ ಹಾಗೂ ಅನಂತರದ ಯಾವುದೇ ಸಂದರ್ಭದಲ್ಲಿ ಯಾವುದಾದರೂ ಪ್ರಭಾವವನ್ನು ಬಳಸಿ ಒತ್ತಡ ತರಲು ಯತ್ನಿಸಿದಲ್ಲಿ ಅಂತಹ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ದಸ್ತಾವೇಜಿನ ಯಾವುದೇ ನಿಬಂಧನೆ ಮತ್ತು ಷರತ್ತುಗಳ ವಿಷಯದಲ್ಲಿ ವಿವಾದ / ಗೊಂದಲ ಉಂಟಾದ ಸಂದರ್ಭದಲ್ಲಿ ಸ್ಪಷ್ಟೀಕರಣಕ್ಕಾಗಿ

"ಡೀನ್ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ ಮೈಸೂರು ಇವರನ್ನು ಸಂಪರ್ಕಿಸಬಹುದು, ಇವರ ತೀರ್ಮಾನವೇ ಅಂತಿಮವಾಗಿರುತ್ತದೆ. ಯಾವುದೇ ಚರ್ಚೆಗೆ ಅವಕಾಶವಿರುವುದಿಲ್ಲ.

20. ಯಶಸ್ವಿ ಟೆಂಡರುದಾರನು ಟೆಂಡರಿನ ದಸ್ತಾವೇಜು 7(ಎ) ರಲ್ಲಿರುವಂತೆ ಭದ್ರತಾ ಠೇವಣಿಯನ್ನು (Security Deposit) ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್ ರೂಪದಲ್ಲಿ 'ಡೀನ್', ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ ಮೈಸೂರು ಇವರ ಹೆಸರಿನಲ್ಲಿ ಪಡೆದು ಸಲ್ಲಿಸಬೇಕು. ನಂತರ ರೂ. 100-00 (ಒಂದು ನೂರು ರೂಪಾಯಿ ಮಾತ್ರ) ಛಾಪಾ ಕಾಗದದ ಮೇಲೆ ಇಲಾಖೆ ನಿಗದಿಪಡಿಸಿದ ಗುತ್ತಿಗೆಯ ಎಲ್ಲಾ ನಿಬಂಧನೆ ಮತ್ತು ಷರತ್ತುಗಳಿಗೆ ಬದ್ಧರಾಗಿರುವ ಬಗ್ಗೆ ಕರಾರು ಒಪ್ಪಂದ ಪತ್ರವನ್ನು ಬರೆದುಕೊಡಬೇಕು.

21. ಟೆಂಡರ್‌ದಾರರ ಏಜೆನ್ಸಿ ಸಂಸ್ಥೆಯು ನಿಯೋಜಿಸುವ ಗ್ರೂಪ್ ಡಿ ವೃಂದದ ತೋಟದ ಮಾಲಿ, ಕಾವಲುಗಾರರು, ಸ್ವಚ್ಛತಾಗಾರರ ಮತ್ತು ಸೇವಕ ಸಿಬ್ಬಂದಿ ಇವರು ಕನಿಷ್ಟ 7ನೇ ತರಗತಿಯ ವಿದ್ಯಾಭ್ಯಾಸ ಹೊಂದಿರಬೇಕು. ಕನ್ನಡ ಭಾಷೆ ಮಾತನಾಡಲು, ಓದಲು ಮತ್ತು ಬರೆಯಲು ಬರಬೇಕು. ಯಾವುದೇ ಸಮಯದಲ್ಲಿ ಸಿಬ್ಬಂದಿಯನ್ನು ಬದಲಾಯಿಸಿ ಹೊಸದಾಗಿ ಸಿಬ್ಬಂದಿಯನ್ನು ನಿಯೋಜಿಸುವ ವೇಳೆ ಅದನ್ನು ಮುಂಚಿತವಾಗಿ ಡೀನ್, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ ಮೈಸೂರು ಇವರ ಗಮನಕ್ಕೆ ಕಡ್ಡಾಯವಾಗಿ ತರಬೇಕು.

22. ದಿನದ ಕರ್ತವ್ಯದ ಮೇಲೆ ನಿಯೋಜಿತರಾದ ಸಿಬ್ಬಂದಿಗೆ ಪ್ರಾಧಿಕಾರ ಅಗತ್ಯಾನುಸಾರ /ಸಂದರ್ಭಾನುಸಾರ/ ಅಂದಿನ ಕೆಲಸಗಳಿಗನುಗುಣವಾಗಿ ಇತರ ಯಾವುದೇ ಕರ್ತವ್ಯಗಳನ್ನು ನಿರ್ವಹಿಸಲು ಸೂಚಿಸಿದಾಗ ಅದನ್ನು ತಪ್ಪದೆ ಪಾಲನೆ ಮಾಡಲು ಸಿದ್ಧರಿರಬೇಕು.

23. ನಿಯೋಜಿಸಿದ ಸಿಬ್ಬಂದಿಯು ಬೇಜವಾಬಾರಿತನ / ಕರ್ತವ್ಯಲೋಪದಿಂದ ಉಂಟಾದ ಯಾವುದೇ ವಸ್ತುಗಳ ನಷ್ಟ ಹಾಗೂ ಆರ್ಥಿಕ ನಷ್ಟಗಳಿಗೆ ಏಜೆನ್ಸಿ ಸಂಸ್ಥೆಯೇ ಜವಾಬ್ದಾರರಾಗಿ ಆ ನಷ್ಟವನ್ನು ತುಂಬಿಕೊಡಲು ಸಿದ್ಧರಿರಬೇಕು.

24. ನಿಯೋಜಿಸಿದ ಸಿಬ್ಬಂದಿಯ ಯಾವುದೇ ಟ್ರೇಡ್ ಯೂನಿಯನ್‌ಗಳಲ್ಲಿ, ಕಾರ್ಮಿಕ ಸಂಘಟನೆಗಳ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿಲ್ಲ ಎನ್ನುವ ಬಗ್ಗೆ ಸಂಸ್ಥೆ ಖಾತರಿಪಡಿಸಿಕೊಂಡಿರಬೇಕು ಮತ್ತು ಪ್ರತಿಭಟನೆ ಸಂಘಟನೆಗಳ ತಂಡ ರಚಿಸಿ ಹೋರಾಟ ಪ್ರವೃತ್ತಿಯವರಾಗಿರಬಾರದು.

25. ದರಪಟ್ಟಿಯನ್ನು ಸಲ್ಲಿಸುವುದಕ್ಕೆ ಮೊದಲು ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಸಿದ್ಧಾರ್ಥನಗರ, ಮೈಸೂರು ಇದರ ವ್ಯಾಪ್ತಿಯಲ್ಲಿ ಬರುವ ಪ್ರದೇಶ, ಕಚೇರಿ ಮತ್ತು ಇತರೆ ಕಟ್ಟಡಗಳನ್ನು ಪರಿಶೀಲಿಸಿ ಕೊಳ್ಳಬಹುದಾಗಿದೆ.

26. ಟೆಂಡರ್ ಅಂಗೀಕರಿಸಲಾಗಿರುವ ಹಾಗೂ ಕಾರ್ಯಾದೇಶವನ್ನು ಹೊರಡಿಸಲಾಗಿರುವ ಏಜೆನ್ಸಿಯು ಒಪ್ಪಂದ ಪತ್ರದ ಸಲ್ಲಿಕೆ, ನಿಗದಿತ ಭದ್ರತಾ ಠೇವಣಿಯ ಪಾವತಿ ಇವುಗಳನ್ನು

ಸಕಾಲದಲ್ಲಿ ಸಲ್ಲಿಸಲು ವಿಫಲವಾದಲ್ಲಿ, ಸದರಿ ಏಜೆನ್ಸಿ ಸಲ್ಲಿಸಿರುವ ಇಎಂಡಿ (ಮುಂಗಡ ಠೇವಣಿ) ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಇಲಾಖೆಗೆ ಇರುತ್ತದೆ.

27. ಟೆಂಡರ್ ನ್ನು ಅಧಿಸೂಚನೆಯ ಮೂಲಕ ಕರೆದ ಮಾತ್ರಕ್ಕೆ ಟೆಂಡರುದಾರನ ಟೆಂಡರ್ ನ್ನು ಒಪ್ಪಿಕೊಳ್ಳುವ ಬಗ್ಗೆ ಟೆಂಡರುದಾರನಿಗೆ ಯಾವುದೇ ಹಕ್ಕು ಇರುವುದಿಲ್ಲ.

ಯಾವುದೇ ಕಾರಣವನ್ನು ನೀಡದೆ, ಗುತ್ತಿಗೆ ನೀಡುವುದಕ್ಕೆ ಮೊದಲು ಯಾವುದೇ ಸಮಯದಲ್ಲಿ ಟೆಂಡರ್ ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಡೀನ್ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಇವರು ಕಾಯ್ದಿರಿಸಿಕೊಂಡಿರುತ್ತಾರೆ. ಇಲಾಖೆಯು ಕನಿಷ್ಟ ದರ ಸೂಚಿಸುವ ಯಾವುದೇ ಟೆಂಡರ್ ಅನ್ನು ಅಂಗೀಕರಿಸಲೇಬೇಕೆಂದಿಲ್ಲ.

[**ದೇವರಾಜು.ವಿ.** ಕ.ಆ.ಸೇ.]
ಡೀನ್
ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು,
[ಕಾವಾ) ಮೈಸೂರು.

ಡೀನ್
ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು
(ಕಾವಾ), ಮೈಸೂರು.

# <u>ವೆಚ್ಚದ ವಿವರ</u>

**ಟೇಬಲ್-1**

| ಕ್ರ.ಸಂ | ಹುದ್ದೆಯ ವಿವರ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|
| 1 | ತೋಟದ ಮಾಲಿ | 01 |
| 2 | ಕಾವಲುಗಾರರು | 02 |
| 3 | ಸ್ವಚ್ಛತೆಗಾರರು | 02 |
| 4 | ಸೇವಕರು | 03 |

**<u>ತೋಟದ ಮಾಲಿ, ಕಾವಲುಗಾರರು, ಸ್ವಚ್ಛತೆಗಾರರು ಮತ್ತು ಸೇವಕರು</u>**

**ಟೇಬಲ್-1 (ಎ)**

| ಕ್ರ.ಸಂ | ವಿವರ | ಮೊಬಲಗು ರೂಗಳಲ್ಲಿ |
|---|---|---|
| 1 | ಮಾಹೆಯ ವೇತನದ ಮೂಲ ವೇತನ +ವಿಡಿಎ | ಹೊರಗುತ್ತಿಗೆ ನೌಕರರಿಗೆ ಸರ್ಕಾರದ ಆದೇಶದಂತೆ ವೇತನ ಪಾವತಿಸಲಾಗುವುದು (ಕ್ರ.ಸಂ. 1 ರಿಂದ 5) |
| 2 | ಇಎಸ್ಐ (ಸರ್ಕಾರದ ನಿಯಮದಂತೆ) | |
| 3 | ಪಿಎಫ್ (ಸರ್ಕಾರದ ನಿಯಮದಂತೆ) | |
| 4 | ಇತರೆ ವೆಚ್ಚದ ವಿವರ (ಸರ್ಕಾರದ ನಿಯಮದಂತೆ) | |
| 5 | ಜಿ ಎಸ್ ಟಿ ಟ್ಯಾಕ್ಸ್ (ಸರ್ಕಾರದ ನಿಯಮದಂತೆ) | |
| | ಒಟ್ಟು ಮೊಬಲಗು (ಎ) | |

**ಟೇಬಲ್ -2**

| ಕ್ರ. ಸಂ | ಹುದ್ದೆಯ ವಿವರ | ಒಟ್ಟು ಸೇವಾ ಶುಲ್ಕ (ರೂ.1/- ರೂ ಗಳ ಮೇಲ್ಪಟ್ಟು) |
|---|---|---|
| 1 | 'ಡಿ' ವೃಂದದ ತೋಟದ ಮಾಲಿ, ಕಾವಲುಗಾರರು, ಸ್ವಚ್ಛತೆಗಾರರು ಮತ್ತು ಸೇವಕರುಗಳ ಸರಬರಾಜಿಗಾಗಿ ಸೇವಾ ಶುಲ್ಕ | Only for reference,don't quote rate here |

**ಸೂಚನೆ:-**

1. ಕೋಷ್ಟಕ ಸಂಖ್ಯೆ 2 ರಲ್ಲಿನ ಮೊತ್ತ (2) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಬೇಕು.

2. ಸಿಬ್ಬಂದಿ ಸಂಖ್ಯೆ ಅಂದರೆ, ತೋಟದ ಮಾಲಿ-1, ಕಾವಲುಗಾರರು-2, ಸ್ವಚ್ಛತಾಗಾರರು-2, ಸೇವಕರು-3 ಯಾವುದೇ ಸೂಚಕ ಮಾತ್ರ. ಡೀನ್, ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕ್ಯಾವಾ) ಮೈಸೂರು ಇವರಿಗೆ ಕಛೇರಿ ಕೆಲಸಕ್ಕೆ ಅನುಗುಣವಾಗಿ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಹಕ್ಕಿದೆ. ಅಗತ್ಯಕ್ಕೆ ಅನುಗುಣವಾಗಿ ಇಲಾಖೆಯು ಕೆಲಸದ ಆದೇಶಗಳನ್ನು ನೀಡುತ್ತದೆ.

3. ಕನಿಷ್ಠ ವೇತನ ಕಾಯಿದೆಯಂತೆ ವೇತನವನ್ನು ಪಾವತಿಸಲಾಗುವುದು, ಒಪ್ಪಂದದ ಅವಧಿಯಲ್ಲಿ ಕಾರ್ಮಿಕ ಇಲಾಖೆಯು (ಸರ್ಕಾರ) ಮಾಡಿದ ವೇತನ ಪರಿಷ್ಕರಣೆಯನ್ನು ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕ್ಯಾವಾ) ಮೈಸೂರು ಸಂಸ್ಥೆಯು ಪರಿಗಣಿಸುತ್ತದೆ. ಆದರೆ ಸೇವಾ ಪೂರೈಕೆದಾರರು ಉಲ್ಲೇಖಿಸಿದ ಸೇವಾ ಶುಲ್ಕವು ಒಪ್ಪಂದದ ಅವಧಿಯುದ್ದಕ್ಕೂ ಒಂದೇ ಆಗಿರುತ್ತದೆ. ಯಾವುದೇ ಕಾರಣ ನೀಡದೆ ಯಾವುದೇ ಸೇವಾ ಪೂರೈಕೆದಾರರ ಹಣಕಾಸು ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಡೀನ್, ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕಾವಾ), ಮೈಸೂರು ಸಂಸ್ಥೆಯು ಕಾಯ್ದಿರಿಸಿದೆ. ಒಂದಕ್ಕಿಂತ ಹೆಚ್ಚು ಸಂಸ್ಥೆಗಳು ಇದೇ ರೀತಿಯ ಸೇವಾ ಶುಲ್ಕಗಳನ್ನು ಉಲ್ಲೇಖಿಸಿದರೆ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕ್ಯಾವಾ) ಮೈಸೂರು ಸಂಸ್ಥೆಯಲ್ಲಿ ಸೇವೆ ಸಲ್ಲಿಸುವ ಸಂಸ್ಥೆಗಳಿಗೆ ಆದ್ಯತೆ ನೀಡಲಾಗುತ್ತದೆ.

4. ಸೇವಾ ಪೂರೈಕೆದಾರರು ಸರ್ಕಾರದ ನಿಯಮಗಳ ಪ್ರಕಾರ ಎಲ್ಲಾ ಕಡ್ಡಾಯ ತೆರಿಗೆಗಳನ್ನು ಪಾವತಿಸುತ್ತಾರೆ. ನಿಯಮಗಳು, ಉದಾಹರಣೆಗೆ ಇಎಸ್‌ಐ, ಪಿಎಫ್, ಐಟಿ, ಜಿಎಸ್‌ಟಿ ತೆರಿಗೆಗಳು ಕಾಲಕಾಲಕ್ಕೆ ಅನ್ವಯವಾಗುವ ಯಾವುದೇ ಇತರ ತೆರಿಗೆಗಳು

5. ಶಾಸನಬದ್ಧ ಪರಿಷ್ಕರಣೆಗಳ ಸಂದರ್ಭದಲ್ಲಿ ಚಾಮರಾಜೇಂದ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕ್ಯಾವಾ) ಮೈಸೂರು ವಿಭಾಗವು ಅಂತಹ ಪರಿಷ್ಕೃತ ತೆರಿಗೆ ದರಗಳನ್ನು ಪಾವತಿಸಬೇಕು

6. ಸೇವಾ ಶುಲ್ಕಗಳನ್ನು ರೂಪಾಯಿಗಳಲ್ಲಿ ಉಲ್ಲೇಖಿಸಬೇಕು. (ಒಂದು ರೂಪಾಯಿಗಿಂತ ಕಡಿಮೆಯಿಲ್ಲದಂತೆ

7. ಒಪ್ಪಂದದ ಮೊತ್ತವನ್ನು ಈ ಕೆಳಗಿನಂತೆ ಪಡೆಯಲಾಗುತ್ತದೆ:

   - ಕೋಷ್ಟಕ -1 (ಎ) ನ ಒಟ್ಟು ಮೊತ್ತ (ಎ)
   - ಅನುಮೋದಿತ ಟೆಂಡರ್‌ಗಳ ಸೇವಾ ಶುಲ್ಕಗಳು (ಬಿ)
   - ಮೊತ್ತ (a) + (b) - (ಸಿ)
   - ಒಟ್ಟು ವೈಯಕ್ತಿಕ ಸಂಖ್ಯೆಗಳು

- ತೋಟದ ಮಾಲಿ - 1 Nos.
- ಕಾವಲುಗಾರರು - 2 Nos.
- ಸ್ವಚ್ಛತಗಾರರು - 2 Nos.
- ಸೇವಕರು - 3 Nos.

  - ಒಪ್ಪಂದದ ಅವಧಿ 12 ತಿಂಗಳು 12 Months

ಆದ್ದರಿಂದ, ಒಪ್ಪಂದದ ಮೊತ್ತ = (ಸಿ) x 8 x 1 ............. ರೂಪಾಯಿಗಳು

## ಅನುಸೂಚಿ 'ಎ' – Schedule-A
### ತಾಂತ್ರಿಕ ಬಿಡ್ ನಮೂನೆ
### Technical Bid Format

| ಕ್ರ.ಸಂ | ವಿವರ | ಲಗತ್ತಿಸಿದೆ/ಲಗತ್ತಿಸಿಲ್ಲ. |
|---|---|---|
| 1 | ಟೆಂಡರ್‌ದಾರರ ಹೆಸರು<br><br>ಮತ್ತು ವಿಳಾಸ ಏಜೆನ್ಸಿ ಹೆಸರು ಮೊಬೈಲ್ ಸಂಖ್ಯೆ | |
| 2 | ಕಾರ್ಮಿಕ ಇಲಾಖೆಯಲ್ಲಿ ನೊಂದಣಿಯಾದ ಚಾಲ್ತಿಯಲ್ಲಿರುವ ಪ್ರಮಾಣ ಪತ್ರ (ನೊಂದಣಿ ಪತ್ರದ ಪ್ರತಿ ಲಗತ್ತಿಸಬೇಕು ಹಾಗೂ ಕಾರ್ಮಿಕ ಇಲಾಖೆಯಿಂದ ಷರತ್ತುಗಳು ಉಲ್ಲಂಘನೆಯಾಗದಿರುವ ಬಗ್ಗೆ ಪ್ರಮಾಣೀಕರಿಸಿ ಸಲ್ಲಿಸುವುದು) | |
| 3 | ಖಾಸಗಿಯಾಗಿ ನೊಂದಾಯಿತ ಸಂಸ್ಥೆಯ ಮೂಲಕ ಹೊರಗುತ್ತಿಗೆ ವ್ಯವಹಾರ ನಡೆಸಲು ಚಾಲ್ತಿಯಲ್ಲಿರುವ ಪೊಲೀಸ್ ಪರಿಶೀಲನಾ ಅನುಮತಿ ಪ್ರಮಾಣ ಪತ್ರ | |
| 4 | ಇ.ಪಿ.ಎಫ್ ಕಾಯ್ದೆ ಅಡಿಯಲ್ಲಿ ಪಡೆದಿರುವ ಕೋಡ್ ಸಂಖ್ಯೆ ವಿವರ (ಪ್ರತಿ ಲಗತ್ತಿಸುವುದು) ಸಿಬ್ಬಂದಿ ವಂತಿಕೆ ಪಾವತಿಯ ಕಡ್ಡಾಯ ಸದಸ್ಯರಾಗಿರುವ ಸಕ್ಷಮ ಪ್ರಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಹಾಗೂ ಇ.ಪಿ.ಎಫ್ ಕಮೀಷನರ್ ರವರಿಂದ ಪಡೆದ 2020–2021 ನೇ ಸಾಲಿನಲ್ಲಿ ಪಾವತಿಸಿರುವ ಬಗ್ಗೆ ಪ್ರಮಾಣ ಪತ್ರ. | |
| 5 | ಇ.ಎಸ್.ಐ ಕಾಯ್ದೆ ಅಡಿಯಲ್ಲಿ ಪಡೆದಿರುವ ಕೋಡ್ ಸಂಖ್ಯೆ ವಿವರ (ಪ್ರತಿ ಲಗತ್ತಿಸುವುದು) ಹಾಗೂ ಇ.ಎಸ್.ಐ ಡೆಪ್ಯುಟಿ ಡೈರೆಕ್ಟರ್ ರವರಿಂದ 2020–2021 ನೇ ಸಾಲಿನಲ್ಲಿ ಪಾವತಿಸಿರುವ ಬಗ್ಗೆ ಪ್ರಮಾಣ ಪತ್ರ. | |
| 6 | ಚಾಲ್ತಿಯಲ್ಲಿರುವ ಉದ್ದಿಮೆ ಪರವಾನಿಗೆ ಪ್ರಮಾಣ ಪತ್ರವನ್ನು ಲಗತ್ತಿಸುವುದು. (**Firm registration certificate**) | |
| 7 | ಜಿ.ಎಸ್.ಟಿ (ನೊಂದಣಿ ಪತ್ರದ ಪ್ರತಿ ಲಗತ್ತಿಸಬೇಕು) 2020–21 ನೇ ಸಾಲಿನಲ್ಲಿ ಸಂಸ್ಥೆಯಿಂದ ಆದಾಯ ತೆರಿಗೆ ಪಾವತಿಸಿರುವ ಬಗ್ಗೆ ಹಾಗೂ ಕಚೇರಿ ವಿವರವನ್ನೊಳಗೊಂಡ ಮೊತ್ತದ ಮಾಹಿತಿಯನ್ನು ಟಿ.ಡಿ.ಎಸ್‌ನ ವಿವರದ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು. ಹಾಗೂ 2018–19 ರಿಂದ 2020–2021 ರ ವರೆಗೆ ಆದಾಯ ತೆರಿಗೆ ಪಾವತಿಸಿರುವ ಬಗ್ಗೆ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು. | |
| 8 | 2018–19 ರಿಂದ 2020–21 ರವರೆಗೆ ಕನಿಷ್ಠ 50.00 ಲಕ್ಷಗಳ ವಾರ್ಷಿಕ ಹಣಕಾಸು ವಹಿವಾಟು ನಡೆಸಿರುವ ಬಗ್ಗೆ ಚಾರ್ಟೆಡ್ ಅಕೌಂಟೆಂಟ್ ರವರಿಂದ ಪಡೆದ ಬ್ಯಾಲೆನ್ಸ ಶೀಟ್ ಸಲ್ಲಿಸುವುದು. | |
| 9 | 2019–20 ಮತ್ತು 2020–21 ನೇ ಸಾಲಿನ ವೃತ್ತಿ ತೆರಿಗೆಯನ್ನು ಸಂಬಂಧ ಪಟ್ಟ ಇಲಾಖೆಯಲ್ಲಿ ಪಾವತಿಸಿರುವ ತೀರುವಳಿ ಪತ್ರ ಲಗತ್ತಿಸುವುದು. | |

| | | |
|---|---|---|
| 10 | 2016–17 ರಿಂದ 2020–21 ರ ವರೆಗೆ ಈ ಹಿಂದೆ ಸೇವೆ ನೀಡಿದ ಸಂಸ್ಥೆಗಳಿಂದ ಟೆಂಡರ್‌ದಾರರು 2 ಟೆಂಡರುಗಳಲ್ಲಿ 30 ಸಿಬ್ಬಂದಿಗಳನ್ನು ಉತ್ತಮ/ತೃಪ್ತಿದಾಯಕ ಸೇವೆ ಒದಗಿಸಿದ್ದಾರೆಂಬ ಬಗ್ಗೆ ಸೇವಾ ದೃಢೀಕರಣ ಪತ್ರಗಳು.( ಸೇವಾ ದೃಢೀಕರಣ ಪತ್ರಗಳಲ್ಲಿ ಒದಗಿಸಿರುವ ಸಿಬ್ಬಂದಿಗಳ ಸಂಖ್ಯೆ ಮತ್ತು ವರ್ಗ ನಮೂದಿಸುವುದು, ಕಾರ್ಯಾದೇಶಗಳನ್ನು ಪರಿಗಣಿಸುವುದಿಲ್ಲ) | |
| 11 | ಸಂಸ್ಥೆಯು ಕಪ್ಪು ಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ನೋಟರಿಯಿಂದ ದೃಢೀಕರಿಸಿರುವ 100 ರೂಗಳ ಛಾಪಾ ಕಾಗದದ ಪ್ರತಿ ಲಗತ್ತಿಸುವುದು. | |
| 12 | ಐ.ಎಸ್.ಓ ಮಾನ್ಯತೆ ಪಡೆದಿರುವ ಪ್ರಮಾಣ ಪತ್ರವನ್ನು ಲಗತ್ತಿಸುವುದು. | |

ಟೆಂಡರ್ ದಸ್ತಾವೇಜಗಳನ್ನು ಪರಿಶೀಲಿಸಿ ಮೇಲಿನ ಮಾಹಿತಿ ನೀಡಿದ್ದು, ಎಲ್ಲಾ ಮಾಹಿತಿಯು ಸರಿ ಇದೆ ಎಂದು ದೃಢೀಕರಿಸಿದೆ. ಈ ಮೇಲ್ಕಂಡ ದಾಖಲೆ/ ಮಾಹಿತಿ ಸುಳ್ಳು ಎಂದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲು ಹಾಗೂ ಟೆಂಡರ್ ಅರ್ಜಿಯನ್ನು ತಿರಸ್ಕರಿಸುವ ಬಗ್ಗೆ ನನ್ನ ಆಕ್ಷೇಪಣೆ ಇರುವುದಿಲ್ಲವೆಂದು ಪ್ರಮಾಣೀಕರಿಸಿ ಟೆಂಡರ್ ನಿಬಂಧನೆಗಳಿಗೆ ಒಪ್ಪಿ ಸಲ್ಲಿಸಿರುತ್ತೇನೆ.

**ಸ್ಥಳ:**

**ದಿನಾಂಕ:** **ಟೆಂಡರ್‌ದಾರರ ಹೆಸರು ಸಹಿ**

**ಮತ್ತು ಮೊಹರು**

ಕರ್ನಾಟಕ ಸರ್ಕಾರ
(ಕನ್ನಡ ಮತ್ತು ಸಂಸ್ಕೃತಿ ಇಲಾಖೆ)
**ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು [ಕಾವಾ],ಸಿದ್ದಾರ್ಥ ನಗರ, ಮೈಸೂರು**
Chamarajendra Government College of Visual Arts[CAVA], Siddarthanagar, Mysore
Phone: 0821-2438931,2438930e-Mail : deancava@gmail.com

ನಂ.ಸಿಎವಿ/ಎಡಿಎಂ/ಸಿಆರ್/67 /2023-24 ದಿನಾಂಕ: /08/2023

**ಟೆಂಡರ್ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು [ಕಾವಾ], ಮೈಸೂರು ಇಲ್ಲಿನ ಕಾರ್ಯ ನಿರ್ವಹಣೆಗೆ ಗ್ರೂಪ್ ಡಿ ವೃಂದದ ತೋಟದ ಮಾಲಿ, ಕಾವಲುಗಾರರು, ಸ್ವಚ್ಛತಾಗಾರರು, ಹಾಗೂ ಸೇವಕರ ಸೇವೆಯನ್ನು ಒದಗಿಸಲು ನೋಂದಾಯಿತ ಮತ್ತು ಪರವಾನಗಿಯುಳ್ಳ ಅರ್ಹ ಏಜೆನ್ಸಿ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಗದಿತ ನಮೂನೆಯಲ್ಲಿ 2 ಬಿಡ್ ವಿಧಾನದಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿದೆ.

| | | |
|---|---|---|
| 1. | ಟೆಂಡರ್ ಪ್ರಕಟಣೆಯ ದಿನಾಂಕ | 14.08.2023 |
| 2. | ಟೆಂಡರ್ ಡಾಕ್ಯೂಮೆಂಟ್ ಅಂತರ್ಜಾಲದಲ್ಲಿ ಪಡೆಯುವ ಆರಂಭಿಕ ದಿನಾಂಕ | 14.08..2023 |
| 3. | ಟೆಂಡರ್ ಡಾಕ್ಯೂಮೆಂಟ್ ಅಂತರ್ಜಾಲದಲ್ಲಿ ಪಡೆಯಲು ಕೊನೆಯ ದಿನಾಂಕ | 29.08.2023 |
| 4. | ಭರ್ತಿ ಮಾಡಿದ ಟೆಂಡರ್‌ನ್ನು ಅಂತರ್ಜಾಲದ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ | 29.08.2023 |
| 5. | ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ | 31.08.2023<br>ಸಂಜೆ 4.00 ಗಂಟೆ |
| 6. | ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ | 01.09.2023<br>ಸಂಜೆ 4.00 ಗಂಟೆ |

ಟೆಂಡರ್‌ಗೆ ಇಟ್ಟಿರುವ ವಾರ್ಷಿಕ ಅಂದಾಜು ಮೊತ್ತ ರೂ 19.00 ಲಕ್ಷ [ರೂಪಾಯಿ ಹತ್ತೊಂಭತ್ತು ಲಕ್ಷ] ನಿಗದಿಪಡಿಸಿದ ಇ.ಎಂ.ಡಿ ಮೊತ್ತ ರೂ.47500.00/- (ನಲವತ್ತೇಳು ಸಾವಿರದ ಐದುನೂರು ಗಳು ) ಟೆಂಡರ್‌ನ್ನು ನಿಗದಿಪಡಿಸಲಾದ ನಮೂನೆಯಲ್ಲಿ ಭರ್ತಿಮಾಡಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವುದು. ಟೆಂಡರ್ ಫಾರಂ ಮತ್ತು ಇತರೆ ವಿವರಗಳು ನಿಬಂಧನೆಗಳು ಮತ್ತು ಷರತ್ತುಗಳನ್ನು ವೆಬ್ ಸೈಟ್ https://eproc.karnataka.gov.in ಅಂತರ್ಜಾಲದ ಮೂಲಕ ಪಡೆದು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ 0821-2438931

ಡೀನ್,
ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು,
[ಕಾವಾ]. ಮೈಸೂರು

ಕರ್ನಾಟಕ ಸರ್ಕಾರ
(ಕನ್ನಡ ಮತ್ತು ಸಂಸ್ಕೃತಿ ಇಲಾಖೆ)

# ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು [ಕಾವಾ],ಸಿದ್ದಾರ್ಥ ನಗರ, ಮೈಸೂರು

Chamarajendra Government College of Visual Arts[CAVA], Siddarthanagar, Mysore

Phone: 0821-2438931,2438930e-Mail : deancava@gmail.com

ನಂ.ಸಿಎವಿ/ಎಡಿಎಂ/ಸಿಆರ್/67/2023-24 ದಿನಾಂಕ: /08/2023

## ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000 ರನ್ವಯ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು [ಕಾವಾ], ಮೈಸೂರು ವತಿಯಿಂದ ಸ್ಟ್ಯಾಂಡರ್ಡ್ ಬಿಡ್ ಡ್ಯಾಕುಮೆಂಟ್ ಅನ್ವಯ ನೊಂದಾಯಿತ ಬಾಹ್ಯಮೂಲ ಸಂಸ್ಥೆಗಳ ಮೂಲಕ ಭದ್ರತಾ ಸಿಬ್ಬಂದಿಗಳನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಈ ಕೆಳಕಂಡಂತೆ ಹೊರಗುತ್ತಿಗೆ ಸೇವಾ ಸಂಸ್ಥೆಯು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. ಟೆಂಡರ್‌ದಾರರು ತಿಳುವಳಿಕೆ ಪತ್ರದ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ಹೆಚ್ಚಿನ ವಿವರಗಳಿಗೆ ಈ ಕಛೇರಿ ಹಾಗೂ ದೂರವಾಣಿ ಸಂಖ್ಯೆ 0821–2438931 ರಿಂದ ಮಾಹಿತಿ ಪಡೆಯಬಹುದು. ಕೆಳಕಂಡಂತೆ ನಿಗಧಿಪಡಿಸಿದ ಇ.ಎಂ.ಡಿ ಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ [Validity Period] 45 ದಿನಗಳ ನಂತರದವರೆಗೆ ಮಾನ್ಯತೆ ಇರತಕ್ಕದ್ದು.

| ಕ್ರ ಸಂ | ಕಾಮಗಾರಿಯ ಹೆಸರು | ಟೆಂಡರ್‌ಗಿಟ್ಟ ಮೊತ್ತ [ರೂ. ಲಕ್ಷಗಳಲ್ಲಿ] | ಮುಂಗಡ ಠೇವಣಿ [ರೂ. ಲಕ್ಷಗಳಲ್ಲಿ] | ಕಾಲಾವಧಿ |
|---|---|---|---|---|
| 1 | ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು [ಕಾವಾ], ಮೈಸೂರು ಇವರಿಗೆ ಖಾಸಗಿ ಎಜೆನ್ಸಿ ಯವರಿಂದ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್ ಡಿ ವೃಂದದ ತೋಟದ ಮಾಲಿ, ಕಾವಲುಗಾರರು, ಸ್ವಚ್ಛತಗಾರರು ಮತ್ತು ಸೇವಕ ಸಿಬ್ಬಂದಿಗಳ ಸೇವೆಯನ್ನು ಒದಗಿಸುವ ಕುರಿತು. | 19.00 ಲಕ್ಷ | 47.500/– | 12 ತಿಂಗಳು |

ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ 14/08/2023 ರಿಂದ ಪಡೆಯಬಹುದು. ಭರ್ತಿ ಮಾಡಿದ ಬಿಡ್‌ಗಳನ್ನು ಹಾಗೂ ಇ.ಎಂ.ಡಿ. ಠೇವಣಿಗಳನ್ನು ಆನ್‌ಲೈನ್ ಮೂಲಕ ಸೇವೆಗೆ ದಿನಾಂಕ: 29/08/2023 ರ ಸಂಜೆ 5:30 ಗಂಟೆಯೊಳಗೆ ಟೆಂಡರ್‌ನ್ನು ಸಲ್ಲಿಸುವುದು. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 31/08/2023 ರಂದು ಸಂಜೆ 4.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ಗಳನ್ನು ದಿನಾಂಕ: 01/09/2023 ರಂದು ಸಂಜೆ 4.00 ಗಂಟೆಗೆ ತೆರೆಯಲಾಗುವುದು ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯುವುದು.

ಮೇಲ್ಕಂಡ ಸೇವೆಯ ಟೆಂಡರ್‌ಗಿಟ್ಟ ಅಂದಾಜು ಮೊತ್ತ, ಇ.ಎಂ.ಡಿ. ಮತ್ತು ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿರುವ ಸಮಯದಲ್ಲಿ ಯಾವುದಾದರು ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ವಿವರಗಳು ಅಂತಿಮವಾಗಿರುತ್ತದೆ. ಟೆಂಡರ್ ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ: **080–22485867** ನ್ನು ಸಂಪರ್ಕಿಸಲು ಕೋರಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ದೂರವಾಣಿ ಸಂಖ್ಯೆ **0821–2438931** ರ ಮುಖಾಂತರ ಪಡೆಯಲು ಕೋರಲಾಗಿದೆ.

ಡೀನ್
ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು
(ಕಾವಾ)ಮೈಸೂರು.